International Journal of Kannada Research
www.kannadajournal.com

ISSN: 2454–5813
IJKR 2023; 9(3): 28-30
© 2023 IJKR
www.kannadajournal.com
Received: 07-06-2023
Accepted: 11-07-2023

**ಡಾ.ಮಹದೇವಪ್ರಸಾದ್ ಎನ್.ಎಸ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು-೫೭೦೩೦೧, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

# ಬುದ್ಧ ಮತ್ತು ಕನ್ನಡ ಸಾಹಿತ್ಯ

**ಡಾ.ಮಹದೇವಪ್ರಸಾದ್ ಎನ್.ಎಸ್.**

***ಪೀಠಿಕೆ***

ಬುದ್ಧನ ಬದುಕಿನ ಚಾರಿತ್ರಿಕ ಅಂಶಗಳನ್ನು ಸ್ಥೂಲವಾಗಿ ನೋಡಿದಾಗ ಈಗಿನ ನೇಪಾಳದಲ್ಲಿ, ಭಾರತದ ಗಡಿಯ ಬಳಿ ಅವನು ಕ್ರಿ.ಪೂ. ೫೬೩ ರಲ್ಲಿ ಹುಟ್ಟಿದನು. ಸಿದ್ಧಾರ್ಥ ಗೌತಮ ಶಾಕ್ಯ ಎಂಬುದು ಅವನ ಹೆಸರು. ಇಟ್ಟ ಹೆಸರು ಸಿದ್ಧಾರ್ಥ, ಅಂಕಿತನಾಮ ಗೌತಮ, ಕುಲನಾಮ ಶಾಕ್ಯ. ಅವನ ತಂದೆ ಸಣ್ಣದೊಂದು ರಾಜ್ಯದ ದೊರೆ ಶುದ್ಧೋಧನ, ತಾಯಿ ಮಹಾಮಾಯದೇವಿ. ಮಗುವನ್ನು ವೈಭವದಿಂದ ಬೆಳೆಸಿದರು. “ ರೇಷ್ಮೆ ವಸ್ತ್ರವನ್ನುಡುತ್ತಿದ್ದ ನನ್ನ ಮೇಲೆ ಶ್ವೇತಚ್ಛತ್ರ ಹಿಡಿದಿರುತ್ತಿದ್ದರು, ಮೈಯ ಸುಗಂಧಲೇಪನ ಕಾಶಿಯಿಂದ ಬರುತ್ತಿತ್ತು” ಎಂದು ಬುದ್ಧನೇ ಒಂದು ಕಡೆ ಹೇಳಿದ್ದಾನೆ. ಹೀಗೆ ಸುಕುಮಾರನಾಗಿ ಬೆಳೆದ ಬುದ್ಧ ತನ್ನ ಹದಿನಾರನೆಯ ವಯಸ್ಸಿನಲ್ಲಿ ಪಕ್ಕದ ರಾಜ್ಯದ ರಾಜಕುಮಾರಿ ಯಶೋಧರಾಳನ್ನು ಮದುವೆಯಾದನು, ಅವನಿಗೆ ರಾಹುಲ ಎಂಬ ಮಗನು ಹುಟ್ಟಿದ.

ಸಿದ್ಧಾರ್ಥನಿಗೆ ಎಲ್ಲವೂ ಇತ್ತು ; ತಂದೆ ತಾಯಿಗಳು ಕುಲೀನ ವಂಶಜರು, ಆಕರ್ಷಕವಾದ ಅವನ ರೂಪ ನೋಡಿದವರಲ್ಲಿ ನಲಿವನ್ನುಂಟು ಮಾಡುತ್ತಿತ್ತು. ರಾಜಯೋಗ್ಯ ಪೌರುಷ ತುಂಬಿ ತುಳುಕುತ್ತಿತ್ತು. ಹಗಲಿರುಳೂ ನಗುಮೊಗದ ರಾಜ ಗಾಂಭೀರ್ಯವುಳ್ಳ ಸ್ವರ್ಗದ ರಾಣಿಯ ವರ್ಚಸ್ಸಿನ ಪ್ರಿಯತಮೆ. ಸ್ವರ್ಗೀಯ ಸೌಂದರ್ಯದ ಮಗು. ಅಲ್ಲದೆ ಅವನು ಸಿಂಹಾಸನದ ಉತ್ತರಾಧಿಕಾರ ಇನ್ನೇನು ಬರಲಿರುವ ರಾಜ್ಯಾಧಿಕಾರ , ಕೀರ್ತಿಗಳು ಇಷ್ಟೆಲ್ಲ ಸೌಭಾಗ್ಯವಿದ್ದರೂ, ಇಪ್ಪತ್ತು ವರ್ಷ ವಯಸ್ಸಿನ ಒಳಗೆ ಅವನೊಳಗೆ ಏನೋ ಒಂದು ಅತೃಪ್ತಿ ಮೊಳೆತು, ಅದೆ ಕೊನೆಗೆ ಅವನು ಐಹಿಕ ಸಿರಿ ಸಂಪತ್ತನ್ನೆಲ್ಲ ತೊರೆದು ಹೊರಟುಹೋಗುವಂತೆ ಮಾಡಿತು. ತನ್ನ ಮನಸ್ಸಿನಲ್ಲಿ ಮೊಳೆತ್ತಿದ್ದ ಸತ್ಯಾನ್ವೇಷಣೆಯ ಕರೆಯನ್ನು ಅನುಸರಿಸಿ, ಇಪ್ಪತ್ತೊಂಭತ್ತನೆಯ ವಯಸ್ಸಿನಲ್ಲಿ ಒಂದು ರಾತ್ರಿ ಮಹಾಪ್ರಸ್ಥಾನದ ನಿರ್ಧಾರವನ್ನು ಮಾಡಿಕೊಂಡು, ಮಧ್ಯರಾತ್ರಿಯ ನಂತರ ಅರಮನೆಯಿಂದ ಹೊರಟು ಜ್ಞಾನಬೋಧಿಯನ್ನು ಅರಸುತ್ತಾ ಅರಣ್ಯದೊಳಗೆ ಪ್ರವೇಶಿಸಿದನು. ಆರು ವರ್ಷಕಾಲ ದೇಹದಂಡನೆ ಮಾಡಿ ಪ್ರಕೃತಿ ಸಹಜ ಎಲ್ಲ ಬಯಕೆಗಳನ್ನು ಮೆಟ್ಟಿನಿಂತ. ಆದರೂ ಅವನಿಗೆ ನಿಜವಾದ ಜ್ಞಾನ ಲಭಿಸಲಿಲ್ಲ. ಈ ವಿಚಾರ ಮಂಥನ ನಡೆಸುತ್ತಾ ಸಿದ್ಧಾರ್ಥ ಸಮೀಪದಲ್ಲಿದ್ದ ಅಶ್ವತ್ಥವೃಕ್ಷದ ಕೆಳಗೆ ಅಂದರೆ ಪವಿತ್ರ ಬೋಧಿವೃಕ್ಷದ ಕೆಳಗೆ ಪದ್ಮಾಸನಸ್ಥನಾಗಿ ಕೂತು, ಈ ಜ್ಞಾನ ನನಗೆ ಲಭಿಸುವವರೆಗೂ ನಾನಿಲ್ಲಿಂದ ಕದಲುವುದಿಲ್ಲ ಎಂದು ತೀರ್ಮಾನಿಸಿದ. ಅವನ ಅಂತಃಕರಣ ಪರಮಾನುಕಂಪದಿಂದ ತುಂಬಿಬಿಟ್ಟಿತು. ಈ ಅನುದ್ವಿಗ್ನ

Corresponding Author:
**ಡಾ.ಮಹದೇವಪ್ರಸಾದ್ ಎನ್.ಎಸ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು-೫೭೦೩೦೧, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

ಅನುಕಂಪದಲ್ಲಿ ಸಿದ್ಧಾರ್ಥ ಬುದ್ಧನಾದ, ಪರಮಜ್ಞಾನಿಯಾದ, ಜಗದ ದುಃಖವನ್ನು ತೊರೆಯುವ ಓಷದೀಶ್ವರನಾದ. ಬುದ್ಧನು ಕಂಡ ಸತ್ಯದ ದರ್ಶನ, ಬೋಧಿ ಅಂದರೆ ತಿಳುವಳಿಕೆ, ಬುದ್ಧನಿಂದ ಸ್ಥಾಪಿತವಾದ ಧರ್ಮವೇ ಬೌದ್ಧಧರ್ಮ, ಬುದ್ಧ ಎಂದರೆ ತಿಳಿದವ, ಇದು ತಿಳುವಳಿಕೆಯ ಧರ್ಮ, ತಿಳಿದವನ ಧರ್ಮ, ಅದು ಚಿತ್ತ ಶುದ್ಧಿಯ ಬೋಧನೆ ಹೀಗೆ ಅರ್ಥೈಸಬಹುದು.

ಬುದ್ಧನ ಪ್ರಭಾವ ಕನ್ನಡದ ನವೋದಯ ಸಾಹಿತ್ಯದಲ್ಲೂ ಇದೆ. ಬುದ್ಧನ ಕುರಿತಾದ ಕಾವ್ಯಗಳು, ನಾಟಕಗಳು ರಚನೆಗೊಂಡಿವೆ. ಅಂತವುಗಳಲ್ಲಿ ಐತಿಹಾಸಿಕವಾಗಿ ಮೊದಲ ಪ್ರಯತ್ನವೆಂದರೆ ಬಿದಿರೆ ಅಶ್ವತ್ಥನಾರಾಯಣಶಾಸ್ತ್ರೀಯವರು ಕ್ರಿ.ಶ. ೧೯೦೭ರಲ್ಲಿ 'ಬೌದ್ಧಾವತಾರ "'ಎಂಬ ಕಿರುಹೊತ್ತಿಗೆ ಹೊರತಂದರು. ಎಸ್. ನರಸಿಂಹಶಾಸ್ತ್ರಿಯವರು ಬುದ್ಧನ ಬೋಧನೆಯ ಸಾರವನ್ನು ಹಾಡಿನ ರೂಪದಲ್ಲಿ ಸಂಗ್ರಹಿಸಿ 'ಬುದ್ಧ ಗೀತಾವಳಿ" ಎಂಬ ಕೃತಿಯನ್ನು ೧೯೩೮ ರಲ್ಲಿ ಪ್ರಕಟಿಸಿದ್ದಾರೆ. ಜಿ.ಪಿ.ರಾಜರತ್ನಂ ಅವರು ಪಾಲಿ ಭಾಷೆಯನ್ನು ಅಭ್ಯಸಿಸಿ ಅಲ್ಲಿಯ ಸಾರವನ್ನು ಕನ್ನಡಕ್ಕೆ ಭಟ್ಟಿ ಇಳಿಸಿದರು, ಭಾಷಾಂತರ, ಅನುವಾದ, ಬೌದ್ಧ ವಿಷಯಕ ಇತರ ಸಾಹಿತ್ಯ ಕುರಿತು ೩೫ ಕೃತಿಗಳನ್ನು ರಚಿಸಿದ್ದಾರೆ.

ಕಡವಶಂಭುಶರ್ಮರು ೧೯೫೭ರಲ್ಲಿ ಅನುವಾದಿಸಿದ 'ಸೌಂದರನಂದ, ಎಸ್.ವಿ.ಪರಮೇಶ್ವರಭಟ್ಟರ 'ಕನ್ನಡ ಬುದ್ಧ ಚರಿತೆ'(೧೯೭೪) ಕೃತಿ, ಮಹಾಕವಿ ಅಶ್ವಘೋಷನ ಭಕ್ತಿ, ಶಕ್ತಿ, ಸತ್ವಗಳ ಪರಿಚಯ ಕನ್ನಡಿಗರಿಗೆ ಆಗಬೇಕು, ಆತನ ವಿಷಯ, ವಿದ್ಯಾವೈಭವ , ತತ್ತ್ವವಿವೇಕ ಇವು ಅಪೂರ್ವವಾಗಿದೆ. ಭಾಸ ,ಕಾಳಿದಾಸಾದಿಗಳ ಮೇಲೆ ಈ ಮಹಾಕವಿಯ ಪ್ರಭಾವ ಬಿದ್ದಿವೆ ಎಂಬುದಕ್ಕೆ ಸಾಕ್ಷಿಗಳನ್ನು ತುಲನಾತ್ಮಕವಾದ ಅಧ್ಯಯನದ ನೆರವಿನಿಂದ ತೋರಿಸುವುದು ಸಾಧ್ಯ ಎಂದು ಪರಮೇಶ್ವರಭಟ್ಟರು ಹೇಳಿದ್ದಾರೆ. ಎಲ್.ಬಸವರಾಜು ಅವರು ಅನುವಾದಿಸಿದ "ಬುದ್ಧಚರಿತೆ"(೧೯೯೯), ಗೋವಿಂದ ಪೈ ಅವರ 'ವೈಶಾಖಿ," ಇದು ಗಾತ್ರದಲ್ಲಿ ಚಿಕ್ಕದಾದರೂ ಅದು ಬೌದ್ಧಧರ್ಮದ ಮುಖ್ಯ ಆಶಯಗಳನ್ನೆಲ್ಲ ತನ್ನಲ್ಲಿ ಒಳಗೊಂಡಿದೆ. ಅಲ್ಲಲ್ಲಿ ಮಹಾಪರಿನಿಬ್ಬಾನಸುತ್ತಕ್ಕಿಂತ ಭಿನ್ನವಾಗಿ ಕಾವ್ಯ ಬೆಳೆಯುತ್ತದೆ, ಅಲ್ಲಲ್ಲಿ ಮೂಲವನ್ನು ಮೊಟಕುಗೊಳಿಸಿ, ಕೆಲವೆಡೆ ಲಂಬಿಸಿ ಬೌದ್ಧಧರ್ಮದ ತತ್ತ್ವದ ಸಾರವನ್ನೆ ಇಲ್ಲಿ ಭಟ್ಟಿ ಇಳಿಸಿದ್ದಾರೆ. ಆರ್. ಸಿ. ಹಿರೇಮಠ ಅವರು ತಮ್ಮ ಕೃತಿ 'ತಥಾಗತ ಚಾರಿತ್ರ"ವನ್ನು ಗೌತಮಬುದ್ಧನ ಕುರಿತ ಮಹಾಕಾವ್ಯ ಎಂದು ಕರೆದುಕೊಂಡಿದ್ದಾರೆ. ಕಾಶಿವಿಶ್ವನಾಥಶೆಟ್ಟಿ ಅವರ 'ಬುದ್ಧ*ಚರಿತಮಹಾ*ಮಧು" ಕೃತಿ ೧೯೮೮ ರಲ್ಲಿ ಪ್ರಕಟವಾಗಿದೆ. ಇದರಲ್ಲಿ ನಾಲ್ಕು ನಾಲ್ಕು ಸಾಲುಗಳ ಆರು ಸಾವಿರ ಪದ್ಯಗಳಿವೆ, ಹೀಗೆ ಬುದ್ಧನನ್ನು ಕುರಿತ ನವೋದಯದ ಕೆಲವು ಕಾವ್ಯಗಳನ್ನು ಪರಿಶೀಲಿಸಬಹುದಾಗಿದೆ.

ಬುದ್ಧನ ಕುರಿತ ನವೋದಯ ನಾಟಕಗಳನ್ನು ಅವಲೋಕಿಸಿದಾಗ ಕುವೆಂಪು ಅವರ "ಮಹಾರಾತ್ರಿ", ಶಿವರಾಮಕಾರಂತರ" "ಕಿಸಾಗೋತಮಿ" ಮಾಸ್ತಿವೆಂಕಟೇಶ ಅಯ್ಯಂಗಾರರ " ಯಶೋಧರಾ", ಬಿ.ಪುಟ್ಟಸ್ವಾಮಯ್ಯ ಅವರ 'ಗೌತಮಬುದ್ಧ" ಮತ್ತು ಡಾ.ಪ್ರಭುಶಂಕರರ 'ಅಂಗುಲಿಮಾಲ , ಅಮ್ರಪಾಲಿ, ಸುಜಾತ ಮತ್ತು ಗಾಳಿ ಎಂಬ ಕುದುರೆ ಏರಿ" ನಾಟಕಗಳು ಪ್ರಮುಖವಾಗಿ ಕಂಡುಬರುತ್ತವೆ. ನಾಟಕಕಾರರ ದೃಷ್ಟಿಯಲ್ಲಿ ಬುದ್ಧನನ್ನು ಕುರಿತು ವಿವೇಚನೆ ಮಾಡಬಹುದು.

ಕನ್ನಡ ನಾಟಕ ಸಾಹಿತ್ಯದಲ್ಲಿ ಕುವೆಂಪು ಅವರ ಹೆಸರು ಪ್ರಮುಖವಾದುದು. ಅವರು ಬುದ್ಧನನ್ನು ಕುರಿತಾಗಿ 'ಮಹಾರಾತ್ರಿ" ನಾಟಕವನ್ನು ರಚಿಸಿದ್ದಾರೆ. ಇದು ಚರಿತ್ರೆಯ ಹಿನ್ನೆಲೆಯಲ್ಲಿ ರಚಿತವಾದುದು, ಮಹಾರಾತ್ರಿಯ ಕಥೆ ಚಾರಿತ್ರಿಕವಾದುದು, ಅದು ಪೌರಾಣಿಕವೂ ನಿಜ. ಕುವೆಂಪು ಅವರು ಇತಿಹಾಸಕ್ಕಿಂತಲೂ ಪುರಾಣಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆಂದು ಹೇಳಬೇಕು. ಇತಿಹಾಸ ಕೇವಲ ಪ್ರಾದೇಶಿಕ ವ್ಯಾಪ್ತಿ. ಆದರೆ ಪುರಾಣ ವಿಶ್ವವ್ಯಾಪಿ , ಪಾಶ್ಚಾತ್ಯರ ಈ ಸಂಕುಚಿತ ಚಾರಿತ್ರಿಕ ದೃಷ್ಟಿಗಿಂತಲೂ ನಿತ್ಯದಲ್ಲಿ ಸ್ಥಿತವಾದ ಪ್ರಾಚ್ಯ ಪೌರಾಣಿಕ ದೃಷ್ಟಿಯಲ್ಲಿ ಅವರಿಗೆ ಹೆಚ್ಚು ಮೆಚ್ಚುಗೆ! ಆದ್ದರಿಂದ ಪೌರಾಣಿಕ ಈ ಕಥೆಯನ್ನು ಸ್ವೀಕರಿಸಿ ಅದನ್ನು ಪ್ರತಿಮಾ ವಿಧಾನದಿಂದ ಇಲ್ಲಿ ಚಿತ್ರಿಸಿದ್ದಾರೆ. ಇಲ್ಲಿರುವ ಕಥೆ ಅತ್ಯಲ್ಪ. ಸಿದ್ಧಾರ್ಥನನ್ನು ಲೋಕದ ಬಡತನ, ಸಂಕಟ, ಮೌಢ್ಯವನ್ನು ಕಂಡು ಮರುಗಿ ರಾಜ್ಯತ್ಯಾಗ ಮಾಡಿ ತಪೋರಾಜ್ಯಕ್ಕಾಗಿ ಪ್ರಸ್ತಾನ ಮಾಡುತ್ತಾನೆ. ಆತನು ಹೀಗೆ ಪ್ರಯಾಣ ಮಾಡ ಹೊರಟ ರಾತ್ರಿಯೇ ಮಹಾರಾತ್ರಿ. ಲೌಕಿಕ, ಅಲೌಕಿಕ ಎರಡು ದೃಷ್ಟಿಯಿಂದಲೂ ಅದು ಮಹಾರಾತ್ರಿಯೇ. ಲೌಕಿಕ ಮೋಹ ಮಮಕಾರಗಳನ್ನು ತೊರೆಯುವುದೆಂದರೆ ಅದು ಕಲ್ಲೆದೆಯವನಿಗೂ ಕಷ್ಟಕರ. ಅಂತಹುದರಲ್ಲಿ ಸುಖ ಸರಸಿಯಲ್ಲಿಯೇ ತೇಲುತ್ತಿದ್ದ ಕೋಮಲ ಪುಷ್ಪ ಅದನ್ನು ತೊರೆವುದೆಂತು. ಆದರೇನು ! ಅದು ಕಮಲ ಪುಷ್ಪ, ನೀರಿನಲ್ಲಿದ್ದರೂ ನೀರಿಗೆ ಪದ್ಮಪತ್ರಮಿವಾಂಭಸ, ಸಿದ್ಧಾರ್ಥ ಸಂಸಾರ ಜೀವನವನ್ನು ತ್ಯಜಿಸಬೇಕೆಂದು ನಿಶ್ಚಯಿಸಿದರೆ ಮತ್ತೊಂದು ಬಲವಾದ ಬಂಧನದಂತೆ ಆತನ

ಪುತ್ರೋದಯದ ವಾರ್ತೆ ಬಂದಿತು. ಆದರೂ ಸಿದ್ಧಾರ್ಥನ ನಿಶ್ಚಯ ಕದಲಲಿಲ್ಲ. ಚೆನ್ನನ ನೆರವಿನಿಂದ ಕುದುರೆಯನ್ನು ಪಡೆದು, ಆ ರಾತ್ರಿಯೆ ರಾಜ್ಯ ಪರಿತ್ಯಾಗ ಮಾಡಿದ. ಆದ್ದರಿಂದ ಲೌಕಿಕ ದೃಷ್ಟಿಯಲ್ಲಿ ಅದು ಮಹಾರಾತ್ರಿ. ಇದಕ್ಕೆ ದೈವದ ನೆರವಿದೆ. ಜಗದೊಡೆಯನು ಕಳುಹಿಸಿರುವ ಅವತಾರ ಪುರುಷರ ಅಧಿಕಾರ ಮುಕುಟ ಸಿದ್ಧಾರ್ಥನ ತಲೆಯನ್ನು ಅಲಂಕರಿಸುತ್ತದೆ. ಅಂದಿನಿಂದ ಆತನಿಗೆ ಜಗತ್ತಿನಲ್ಲಿ ತತ್ವಬೋಧೆಯನ್ನು ಮಾಡುವ ಅಧಿಕಾರ ದೊರೆತಿದೆ. ಆ ರಾತ್ರಿಯಿಂದ ಲೋಕ ಕಲ್ಯಾಣ ಆರಂಭವಾಗುತ್ತದೆ. ಹೀಗೆ ಸಿದ್ಧಾರ್ಥನ ತ್ಯಾಗ , ಅದಕ್ಕೆ ದೊರೆತಿರುವ ದೈವ ಸಂಕಲ್ಪ ಇವೆರಡರಿಂದ ಧನ್ಯವಾಗಿರುವ ರಾತ್ರಿಯೇ "ಮಹಾರಾತ್ರಿ" ಎಂದು ಡಾ. ತ.ಸು. ಶಾಮರಾಯರು ಕನ್ನಡ ನಾಟಕ ಪುಟ ೨೪೩-೨೪೪ ರಲ್ಲಿ ಅಭಿಪ್ರಾಯಿಸಿದ್ದಾರೆ.

ನಾಟಕದುದ್ದಕ್ಕೂ ಸಿದ್ಧಾರ್ಥನ ಮನಸ್ಸಿನಲ್ಲಿ ನಡೆಯುವ ಹೋರಾಟ ಮನೋಹರವಾಗಿದೆ. ಅದು ಶಿಖರವೇರುವ ಸನ್ನಿವೇಷವೇ ಪ್ರತಿಮಾ ರೂಪದಿಂದ ಪ್ರತ್ಯಕ್ಷವಾಗಿದೆ. ಸಿದ್ಧಾರ್ಥ ಪ್ರೇಮಮಯನಾದವನು, ಆ ಪ್ರೇಮ ಉದಾತ್ತವಾದುದು. ಆತನಿಗೆ ಹೆಂಡತಿ ಮಕ್ಕಳಲ್ಲಿ ಅತಿಯಾದ ಪ್ರೇಮವಿದೆ, ಮಮತೆಯೂ ಇದೆ. ತನ್ನ ಸೇವಕ ಚೆನ್ನನನ್ನು ಅಗಲುವುದು, ತನ್ನ ಹೆಂಡತಿ ಮಕ್ಕಳನ್ನು ಅಗಲುವಷ್ಟು ದುಃಖವನ್ನು ತರಿಸುತ್ತದೆ. ಅವನ ಪ್ರೇಮ ಆಗಾಧವಾದುದು. ಆತನಲ್ಲಿ ನಿಷ್ಕಾಮ ಸೇವೆ ಇದೆ. ಪ್ರೇಮವಾದರೂ ವಿಶ್ವ ಪ್ರೇಮವಾಗಿ ಬೆಳೆಯುತ್ತದೆ. ಅವನ ತ್ಯಾಗವೇ ದಿವ್ಯ ತೇಜಸ್ಸಿನ ವಿಶ್ವ ಪ್ರೇಮವಾಗುತ್ತದೆ. ತಾನು ಸಂಪಾದಿಸಿದ ಒಡವೆ, ವಸ್ತ್ರಗಳೆಲ್ಲವನ್ನು ದಾನ ಮಾಡಿ ಬಿಕಾರಿಯಾಗುವ ಬುದ್ಧ ಜಗತ್ತಿನ ಪ್ರೇಮದ ವ್ಯಕ್ತಿಯಾಗಿ , ಈಶ ಶಕ್ತಿಯಾಗಿ ಕಂಡು ಬರುತ್ತಾನೆ. ಅವನ ವಾಣಿ 'ವಿಶ್ವವಾಣಿ' , ಆದ್ದರಿಂದಲೆ ಬುದ್ಧನ ದಿವ್ಯಸಾಧನೆ ಒಂದು 'ದೇವಗಂಗೆ' ಎಂಬ ಮಾತು ಕನ್ನಡ ಸಾಹಿತ್ಯದ ಉದ್ದಗಲಕ್ಕೂ ಕೇಳಿ ಬರುವ ಒಂದು ಅರ್ಥವತ್ತಾದ ಸುಂದರ ನುಡಿ, ಆ ಮಾತಿಗೆ ಅಷ್ಟೇ ಮೌಲಿಕತೆ ಇದೆ.

ಕನ್ನಡ ನಾಟಕ ರಚನೆಯಲ್ಲಿ ಪ್ರಸಿದ್ದವಾದ ಹೆಸರು ಬಿ.ಪುಟ್ಟಸ್ವಾಮಯ್ಯ. ಇವರ ರಚನೆಗಳಲ್ಲಿ 'ಗೌತಮಬುದ್ಧ' ಕೃತಿ ಮೂರು ಅಂಕಗಳಿಂದ ಕೂಡಿದೆ. ಅರಮನೆಯನ್ನು ತ್ಯಜಿಸುವ ಗೌತಮ, ಸತ್ಯಕ್ಕಾಗಿ ಸಂಸಾರ ತೊರೆದು ಜಗತ್ತಿನತ್ತ ಹೊರಡುವ ವಿವರಗಳು ಸತ್ಯ ರೂಪದಿಂದ ಭಾವಪೂರ್ಣವಾಗಿ ರಚನೆಯಾಗಿದೆ. ಬಹುಶಃ ಈ ನಾಟಕ ರಾಷ್ಟ್ರಕವಿ ಕುವೆಂಪು ಅವರ ಮಹಾರಾತ್ರಿ ನಾಟಕದ ಅಂಶಗಳನ್ನೆ ಹೋಲುವಂತಿದೆ.

ಗೌತಮ ಬುದ್ಧ ನಾಟಕದ ಕೊನೆಯಲ್ಲಿ ಬುದ್ಧನು ತನ್ನ ಧರ್ಮಪತ್ನಿ, ಪ್ರಿಯವಲ್ಲಭೆ ಯಶೋಧರೆಯನ್ನು ಸಮಾಧಾನಪಡಿಸಿ ರಾಹುಲನನ್ನು ತನ್ನ ಜೊತೆಯಲ್ಲಿಯೇ ಕರೆದೊಯ್ಯುವ ಚಿತ್ರಣಗಳು ಇವರ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿದೆ. ಈ ವಿವರಗಳು ಶ್ರೀನಿವಾಸರ "ಯಶೋಧರಾ' ನಾಟಕದಲ್ಲಿನ ವಿವರಗಳನ್ನು ಒಳಗೊಂಡಂತೆ ನಾಟಕ ರಚನೆಯಾಗಿದೆ. ರಾಜವೈಭವವನ್ನು ತಿರಸ್ಕರಿಸಿ, ಸಾಮಾನ್ಯರಲ್ಲಿ ಸಾಮಾನ್ಯನಾಗಿ ಜಗತ್ತಿಗೆ ಸತ್ಯ ಮತ್ತು ಪ್ರೇಮವನ್ನು ಸಾರುವ ಮಹಾಮಾನವತಾ ವ್ಯಕ್ತಿಯಾಗಿ ಬುದ್ಧ ಕಂಡು ಬರುತ್ತಾನೆ.

## ಪರಾಮರ್ಶನ ಗ್ರಂಥಗಳು

1. ತ.ಸು.ಶಾಮರಾಯ - ಕನ್ನಡ ನಾಟಕ, ಗೀತಾ ಬುಕ್ ಹೌಸ್, ಮೈಸೂರು, ೧೯೬೨
2. ಪ್ರಧಾನ್ ಗುರುದತ್ತ. - ಕುವೆಂಪು. ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೨೦೦೧
3. ಎ. ಕೃಷ್ಣಮೂರ್ತಿ ಹನೂರು. - ಬಿ. ಪುಟ್ಟಸ್ವಾಮಯ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೨
4. ಜಯಕೃಷ್ಣ ಟಿ.ಎಸ್. - ಸಿದ್ಧಾರ್ಥ, ವಾಸನ್ ಪಬ್ಲಿಕೇಷನ್, ಬೆಂಗಳೂರು, ೨೦೦೧
5. ಡಿ.ಎ. ಶಂಕರ್. – ಕಾರುಣ್ಯಮೂರ್ತಿ ಭಗವಾನ್ ಬುದ್ಧ, ಕಾವ್ಯಲಯ ಪ್ರಕಾಶನ, ಮೈಸೂರು, ೨೦೦೯
6. ಜಯಕೃಷ್ಣ ಟಿ.ಎಸ್. - ಸಿದ್ಧಾರ್ಥ, ವಾಸನ್ ಪಬ್ಲಿಕೇಷನ್, ಬೆಂಗಳೂರು, ೨೦೦೧